ಅದನ್ನು ಮಂಜೂರು ಮಾಡಿ ಆ ಒಂದು ಪ್ರಕ್ರಿಯೆಯನ್ನು ಆದಷ್ಟು ಬೇಗ ಮುಗಿಸಿ ಆ ಭಾಗದಲ್ಲಿ ಬರಗಾಲದಿಂದ ಒದ್ದಾಡುವಂಥ ಜನರಿಗೆ ನೀರು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಕೆರೆ ತುಂಬಿ ಯೋಜನೆ ಮತ್ತು ಇತ್ಯಾದಿ ಯೋಜನೆಗಳನ್ನು ನಮ್ಮ ಅಖಂಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿ ನನ್ನ ಕ್ಷೇತ್ರ 7 ಕೆರೆಗಳು ಮತ್ತು ಮಾನ್ಯ ಎಂ.ಬಿ.ಪಾಟೀಲ್‌ರವರ ಕ್ಷೇತ್ರದಲ್ಲಿ ಸುಮಾರು 15 ಕೆರೆಗಳು ಮತ್ತು 5 ಬಾಂದಾರಗಳು ತುಂಬತಕ್ಕಂಥ 109 ಕೋಟಿ ರೂಪಾಯಿ ಒಂದು ಯೋಜನೆ ಲೋಕಾರ್ಪಣೆಯಾಗಿದೆ. ಈ ಸಾರಿ ಕೃಷ್ಣಾ ನದಿಯಲ್ಲಿ ನೀರು ಕಡಿಮೆಯಾಗಿರುವುದರಿಂದ ಈ ಎಲ್ಲ ಕೆರೆಗಳು ತುಂಬುವುದಕ್ಕೆ ಆಗಿಲ್ಲ. ಆದರೆ, ಈ ಯೋಜನೆ ಸಂಪೂರ್ಣವಾಗಿದೆ. ಯಾವಾಗಲೂ ಬರಗಾಲದಿಂದ ಇರುವಂಥ ಅಖಂಡ, ಬಿಜಾಪುರ ಬಾಗಲಕೋಟೆ ಜಿಲ್ಲೆಗೆ ನಮ್ಮ ಸರ್ಕಾರ ಕ್ರಿಯಾಶೀಲರಾಗಿ ಸಾಕಷ್ಟು ಹಣವನ್ನು ಮಂಜೂರು ಮಾಡಿ ಕೆಲಸವನ್ನು ಮಾಡಿದ್ದಾರೆ. ಉಳಿದಿರುವಂಥ ಎಲ್ಲ ಕೆಲಸಗಳಿಗೆ ಇನ್ನಷ್ಟು ಧನ ಸಹಾಯ ಮಾಡಿ ಅವುಗಳನ್ನು ಸಂಪೂರ್ಣವಾಗಿ ಜಾರಿಗೆ ತರುವಂಥ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈ ಚರ್ಚೆಯನ್ನು ನಾಳೆಗೆ ಮುಂದುವರಿಸಲಾಗಿದೆ. ಆದ್ದರಿಂದ ಉಳಿದವರು ನಾಳೆ ಮಾತನಾಡಿ. ಈಗ ವಿತ್ತೀಯ ಕಾರ್ಯ-ಕಲಾಪಗಳನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

11. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿ (ವಿಧಾನ ಸಭೆ ಸಚಿವಾಲಯ) :- ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ (ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ

ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012 ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಅಧ್ಯಕ್ಷರು :- ಈಗ ಎರಡು-ಮೂರು ಬಿಲ್‌ಗಳನ್ನು ಮಂಡನೆ ಮಾಡೋಣ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) :- ಮಾನ್ಯ ಅಧ್ಯಕ್ಷರೆ, ನಾನು ಪ್ರತಿ ಪಕ್ಷದ ನಾಯಕರಲ್ಲಿ ಈಗಾಗಲೇ ಕೇಳಿಕೊಂಡಿದ್ದೇನೆ. ಈಗ ಮೂರು ಬಿಲ್‌ಗಳನ್ನು ಮಂಡಿಸೋಣ.

ಅಧ್ಯಕ್ಷರು :- ಲ್ಯಾಂಡ್ ರೆವಿನ್ಯೂ ಆಕ್ಟ್ ಬಿಲ್ ಅಲ್ಲಿ ಪಾಸಾಗಿ ಬಂದಿದೆ. ಇನ್ನೊಂದು ಪಾರ್ಟ್ ಇಲ್ಲಯೇ ಉಳಿದುಕೊಂಡಿದೆ . ಅದನ್ನು ಕೇವಲ introduce ಮಾಡಲಿ ಅಷ್ಟೆ.

ಶ್ರೀ ಸಿದ್ದರಾಮಯ್ಯ :- ಆಯಿತು.

12. ಶಾಸನ ರಚನೆ

(ಅ) ವಿಧೇಯಕಗಳನ್ನು ಮಂಡಿಸುವುದು

(1) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ-2012 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಎಸ್.ಈಶ್ವರಪ್ಪ, (ಉಪಮುಖ್ಯಮಂತ್ರಿಗಳು ,ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :- ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕು.